# ಸ್ವಾಮಿ ಪ್ರಭವಾನಂದ (೧೮೯೩-೧೯೭೬)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

**ಭಾಗ ೩**

### (ಸ್ವಾಮಿ ಪ್ರಭವಾನಂದರು ಹೇಳಿದ ಸ್ವಾಮಿ ತುರೀಯಾನಂದರ ಸ್ಮೃತಿಗಳು)

‘‘**ಕಾ**ಶಿಯಲ್ಲಿ ಒಮ್ಮೆ ಒಬ್ಬ ಸಾಧುಗಳೊಂದಿಗೆ (ಸ್ವಾಮಿ ನಿರ್ಮಲಾನಂದ) ನಾನು ತರ್ಕ ಮಾಡಿದೆ. ಅವರು, ಸ್ವಾಮೀಜಿಯವರು ವಿಶಿಷ್ಟಾದ್ವೈತಿಯಾಗಿದ್ದರು, ಅದ್ವೈತಿಯಲ್ಲ ಎಂದಿದ್ದರು. ನಮ್ಮಿಬ್ಬರ ವಾದ ವಿವಾದದ ಬಗ್ಗೆ ಅಚಲಾನಂದರು ಸ್ವಾಮಿ ತುರೀಯಾನಂದರಿಗೆ ತಿಳಿಸಿದರು. ಅವರು ನನ್ನನ್ನು ತಮ್ಮಲ್ಲಿಗೆ ಬರಹೇಳಿ, ‘ನೋಡು, ತರ್ಕ ಎರಡು ರೀತಿಯಲ್ಲಿ ಮಾಡಬಹುದು. ಒಂದು, ಚರ್ಚೆಯ ಮೂಲಕ ಸತ್ಯ ನಿರೂಪಣೆ (ಇದೇ ನಿಜವಾದ ತರ್ಕ). ಎರಡು, ಬಲವಂತವಾಗಿ ನಮ್ಮ ಮತವನ್ನು ಸ್ಥಾಪಿಸುವುದು. ಇದು ನಿಜವಾಗಿಯೂ ಸತ್ಯನಿರೂಪಣೆಯ ರೀತಿಯಲ್ಲ. ಈ ಸಾಧುಗಳು ಸ್ವಲ್ಪ ಸ್ವಾರಸ್ಯವಿರಲೆಂದು ನಿನ್ನೊಂದಿಗೆ ತರ್ಕ ಮಾಡುತ್ತಿದ್ದರು.’

‘‘೧೯೧೫ರಲ್ಲಿ ಗುರುದಾಸ ಮಹಾರಾಜ್, ಸೀತಾಪತಿ ಮಹಾರಾಜ್, ನಾನು ಮತ್ತು ಒಬ್ಬ ಬ್ರಹ್ಮಚಾರಿ ಬದರೀನಾಥ ದರ್ಶನಕ್ಕೆ ಹೋಗಿದ್ದೆವು. ಗುರುದಾಸ ಮಹಾರಾಜರು ಪಾಶ್ಚಾತ್ಯರು. ಅಂದಿನ ಕಾಲದಲ್ಲಿ ಹಿಂದೂ ದೇವಸ್ಥಾನಗಳಲ್ಲಿ ಪಾಶ್ಚಾತ್ಯರ ಪ್ರವೇಶವನ್ನು ನಿಷೇಧಿಸಲಾಗಿತ್ತು. ನಾವು ಮೂರ್ತಿಯ ದರ್ಶನಕ್ಕೆಂದು ತೀರ್ಥಯಾತ್ರಿಗಳೊಡನೆ ಕುಳಿತಿದ್ದಾಗ ಗೌರವರ್ಣದ ಯುವ ಪುರೋಹಿತರೊಬ್ಬರು ಇಂಗಿತ ಮಾಡಿ ನನ್ನನ್ನು ಕರೆದು, ‘ನಿಮ್ಮ ಸಂಗಡಿಗರನ್ನು ಕರೆದುಕೊಂಡು ನನ್ನೊಡನೆ ಬನ್ನಿ’ ಎಂದರು. ಆತನು ದೇವಸ್ಥಾನದ ಒಂದು ಕಡೆಗೆ ನಮ್ಮನ್ನು ಕರೆದುಕೊಂಡು ಹೋಗಿ, ದೇವಸ್ಥಾನದ ಬಾಗಿಲನ್ನು ತೆರೆದು ನಮ್ಮನ್ನು ಗರ್ಭ ಮಂದಿರದೊಳಕ್ಕೆ ಹೋಗಲು ಬಿಟ್ಟರು. ಇತರ ಯಾತ್ರಿಗಳು ದೇವಸ್ಥಾನವನ್ನು ಪ್ರವೇಶಿಸಲಿಚ್ಛಿಸಿದಾಗ ಅವರು, ‘ಇಲ್ಲ, ಈಗ ಇನ್ನೂ ನಿಮ್ಮ ಸಮಯ ಬಂದಿಲ್ಲ’ ಎನ್ನುತ್ತ ಬಾಗಿಲನ್ನು ಮುಚ್ಚಿದರು. ನಂತರ ಅವರು ವಿಗ್ರಹದ ಒಂದು ಪಕ್ಕದಲ್ಲಿ ನಿಂತರು. ಪುರೋಹಿತರು ವಿಗ್ರಹದ ಪಕ್ಕದಲ್ಲಿ ನಿಲ್ಲುವ ಕ್ರಮವಿಲ್ಲ. ಅವರು ವಿಗ್ರಹದ ಎದುರು ನಿಲ್ಲುತ್ತಾರೆ ಎಂಬುದು ನಮ್ಮ ಮನಸ್ಸಿಗೆ ಆಗ ಹೊಳೆಯಲಿಲ್ಲ. ಕೆಲ ನಿಮಿಷಗಳ ಬಳಿಕ ಅವರೆಂದರು, ‘ನಿಮಗೆ ಸರಿಯಾಗಿ ದರ್ಶನವಾಯಿತು ತಾನೆ? ಈಗ ಹೊರಗೆ ಹೋಗಿ.’ ನಾವು ಹೊರಗೆ ಹೋದಾಗ ಅವರು ದೇವಸ್ಥಾನದ ಬಾಗಿಲನ್ನು ಒಳಗಿನಿಂದ ಮುಚ್ಚಿದರು.

‘‘ನಾವು ಮತ್ತೆ ಯಾತ್ರಿಕರೊಂದಿಗೆ ಕುಳಿತೆವು. ಆಗ ಒಬ್ಬರು ನನ್ನನ್ನು ಕರೆದು ಪುರೋಹಿತರ ಹತ್ತಿರ ಕರೆದೊಯ್ದರು. ಅವರು



ಗುರುದಾಸ ಮಹಾರಾಜರ ಬಗ್ಗೆ ವಿಚಾರಿಸಿ, ಬಳಿಕ ‘ಶ್ವೇತಕಾಯರನ್ನು ಮಂದಿರದೊಳಗೆ ಪ್ರವೇಶಿಸಲು ಬಿಡುವುದಿಲ್ಲ’ ಎಂದರು. ಹೊರಗಿನಿಂದಲೇ ವಿಗ್ರಹ ದರ್ಶನದ ವ್ಯವಸ್ಥೆಯನ್ನು ಮಾಡಿಕೊಟ್ಟು, ನಿಯಮಿತವಾಗಿ ಪ್ರಸಾದವನ್ನೂ ಕೊಟ್ಟು ಕಳುಹಿಸಿದ್ದರು. ಸನ್ಮಾನಿತ ಅತಿಥಿಗಳಾಗಿ ನಾವಲ್ಲೇ ಮೂರು ದಿನ ತಂಗಿದ್ದೆವು. ಅಲ್ಲಿದ್ದಾಗ ಅಲ್ಲಿನ ಎಲ್ಲ ಪುರೋಹಿತರ ಪರಿಚಯವೂ ನಮಗಾಯಿತು. ಆದರೆ ಆಶ್ಚರ್ಯವೆಂದರೆ ನಮ್ಮನ್ನು ಗರ್ಭ ಮಂದಿರದೊಳಗೆ ಕರೆದೊಯ್ದಿದ್ದ ಪುರೋಹಿತರು ನಮಗೆ ಪುನಃ ಕಾಣಿಸಲಿಲ್ಲ.

‘‘ಬದರಿ ನಾರಾಯಣದಿಂದ ಆಲ್ಮೋರಾ ಮೂಲಕ ನಾವು ಮಾಯಾವತಿಗೆ ಹೋದೆವು. ಸ್ವಾಮಿ ತುರೀಯಾನಂದರು ಆಗ ಆಲ್ಮೋರಾದ ರಾಮಕೃಷ್ಣ ಕುಟೀರದಲ್ಲಿದ್ದರು. ಅವರಿಗೆ ನಾವು ಬದರೀನಾಥದಲ್ಲಿ ಗರ್ಭಮಂದಿರದ ವಿಗ್ರಹ ದರ್ಶನವನ್ನು ಮಾಡಿದ್ದು ಹೇಗೆಂದು ಹೇಳಿದಾಗ ಅವರು ಉದ್ವಿಗ್ನಗೊಂಡು ಹೇಳಿದರು, ‘ಅಯ್ಯೋ! ನೀವೆಷ್ಟು ಮೂರ್ಖರು! ಠಾಕೂರರನ್ನು ಗುರುತಿಸಲಾಗಲಿಲ್ಲವೆ? ಅವರು ಈ ರೀತಿ ನಿಮ್ಮೆದುರು ಪ್ರತ್ಯಕ್ಷರಾಗಿ ನಿಮ್ಮನ್ನು ಗರ್ಭಮಂದಿರದೊಳಕ್ಕೆ ಕರೆದುಕೊಂಡು ಹೋಗಿದ್ದರಲ್ಲ!’

‘‘ ‘ಶ್ರೀಮಾತೆಯವರ ಮನಸ್ಸು ಅವರ ಕಂಠ-ಸ್ವರದಿಂದ ಕೆಳಗೆ ಎಂದೂ ಇಳಿದದ್ದಿಲ್ಲ’ ಎಂದು ಹರಿ ಮಹಾರಾಜರು ನನಗೊಮ್ಮೆ ಹೇಳಿದ್ದರು.

‘‘೧೯೧೭ರಲ್ಲಿ ತಮ್ಮ ಸಂಗಡಿಗರೊಡನೆ ಬಂದ ರಾಜಾ ಮಹಾರಾಜರು ಪುರಿಯ ಶಶಿ ನಿಕೇತನದಲ್ಲಿ ಉಳಿದುಕೊಂಡಿದ್ದರು. ಹರಿ ಮಹಾರಾಜರು ಕೂಡ ಮಹಾರಾಜರ ಸನ್ನಿಧಾನದಲ್ಲಿದ್ದರು. ಭಕ್ತರೊಬ್ಬರು ಕಲ್ಕತ್ತದಿಂದ ಒಂದು ಪಾರ್ಸೆಲ್ ಕಳುಹಿಸಿದ್ದರು. ಪೂಜ್ಯ ಅಮೂಲ್ಯ ಮಹಾರಾಜರು (ಸ್ವಾಮಿ ಶಂಕರಾನಂದರು) ನನಗೊಂದು ರಸೀದಿಯನ್ನು ಕೊಟ್ಟು, ‘ರೈಲ್ವೇ ಸ್ಟೇಶನ್‌ಗೆ

ಹೋಗು' ಎಂದರು. ನಾನು ಹೋದೆ. ಹೋಗುವಾಗ, ರಸೀದಿಯನ್ನು ಯಾರಿಗೆ ಕೊಡಬೇಕೆಂದಾಗಲಿ, ಅದನ್ನು ಏನು ಮಾಡಬೇಕೆಂಬುದನ್ನಾಗಲಿ ಕೇಳಿ ತಿಳಿದುಕೊಳ್ಳಲಿಲ್ಲವಲ್ಲ ಎಂದುಕೊಂಡೆ. ಹೀಗೆ ಯೋಚಿಸುತ್ತ ರಸ್ತೆಯಲ್ಲಿ ನಡೆಯುತ್ತಿದ್ದಾಗ ಬ್ರಹ್ಮಚಾರಿ ಶ— ಎದುರಾದನು. ಅವನಿಗೆ ರಸೀದಿಯನ್ನು ತೋರಿಸಿ, 'ತಮ್ಮ, ಈ ಕೆಲಸಗಳನ್ನು ನೀನು ಮಾಡುತ್ತೀ; ಈಗ ನಾನೇನು ಮಾಡಬೇಕು ಹೇಳು.' ಆಗ ಶ— ಹೇಳಿದನು, 'ರಸೀದಿ ಯನ್ನು ಸ್ಟೇಷನ್ ಮಾಸ್ಟರ್‌ಗೆ ಕೊಡು. ನಂತರ ಪಾರ್ಸಲ್ ತಲುಪಿ ದಾಗ ಸ್ಟೇಷನ್ ಮಾಸ್ಟರ್ ಕಳುಹಿಸುತ್ತಾರೆ.' ಸರಿ, ನಾನು ಅವನು ಹೇಳಿದಂತೆಯೆ ಸ್ಟೇಷನ್ ಮಾಸ್ಟರ್‌ಗೆ ರಸೀದಿಯನ್ನು ಕೊಟ್ಟು ಹಿಂದಿರುಗಿದೆ. ಆಗ ನೋಡುತ್ತೇನೆ, ರಾಜಾ ಮಹಾರಾಜರು, ಹರಿ ಮಹಾರಾಜರು ಕಾತರರಾಗಿ ಪಾರ್ಸೆಲ್‌ಗಾಗಿ ಕಾಯುತ್ತಿದ್ದಾರೆ! ನಾನು ಬರಿಗೈಯಲ್ಲಿ ಹಿಂದಿರುಗಿದ್ದನ್ನು ಕಂಡ ರಾಜಾ ಮಹಾರಾಜರು ನನ್ನನ್ನು ಬಯ್ಯಲು ಪ್ರಾರಂಭಿಸಿದರು. ಅದೇ ನನ್ನ ಜೀವನದ ಪ್ರಥಮ ಬೈಗುಳ. ಈಗ ಇದೊಂದು ಬಹಳ ಮಧುರ ಸ್ಮೃತಿಯಾಗಿ ಉಳಿದಿದೆ. ದಿನವೆಲ್ಲ ಈ ರೀತಿ ನನ್ನನ್ನು ಬೈದರು. ರಾತ್ರಿ ಮಹಾರಾಜರು ಹಾಗೂ ಹರಿ ಮಹಾರಾಜರು ವರಾಂಡದಲ್ಲಿ ಊಟ ಮಾಡಲು ಕುಳಿತರು. ನಾನು ಬೀಸಣಿಗೆಯಿಂದ ಕೀಟಗಳನ್ನು ಓಡಿಸುತ್ತಿದ್ದೆ. ಮಹಾರಾಜರು ಪುನಃ ಪಾರ್ಸೆಲ್ ವಿಷಯ ಉಲ್ಲೇಖಿಸಿದರು. ಹರಿ ಮಹಾರಾಜರು ನಗುತ್ತ ಕೇಳಿದರು, 'ಅವನಿ, ಮಹಾರಾಜರು ನಿನ್ನನ್ನೇಕೆ ಬಯ್ಯುತ್ತಿರುವ ರೆಂದು ಗೊತ್ತೆ ?' ನಾನೆಂದೆ, 'ಇಲ್ಲ ಮಹಾರಾಜ್.' 'ನೋಡು, ಮೂರು ಬಗೆಯ ಶಿಷ್ಯರಿರುತ್ತಾರೆ. ಉತ್ತಮ ಶಿಷ್ಯ ಗುರುಗಳ ಮನಸ್ಸಿನಲ್ಲೇನಿದೆಯೆಂದು ಮೊದಲೇ ತಿಳಿದುಕೊಂಡು ಅದನ್ನು ಪೂರೈಸುತ್ತಾನೆ. ಮಧ್ಯಮ ಶಿಷ್ಯನು ಗುರುವಿನ ಅವ್ಯಕ್ತ ಭಾವನೆಯನ್ನು ತಿಳಿದುಕೊಂಡು ಅದನ್ನು ಪೂರೈಸುತ್ತಾನೆ. ಅಧಮ ಶಿಷ್ಯನಾದವನು ಗುರುಗಳು ತಮ್ಮ ಆದೇಶವನ್ನು ವ್ಯಕ್ತಪಡಿಸಿದಾಗ ಅದನ್ನು ನೆರವೇರಿಸುತ್ತಾನೆ. ನೀವೆಲ್ಲ ಉತ್ತಮ ಶಿಷ್ಯರಾಗ ಬೇಕೆಂಬುದೇ ಮಹಾರಾಜರ ಆಸೆ.' ನಾನು ಸುಮ್ಮನಿದ್ದೆ. ರಾಜಾ ಮಹಾರಾಜ್ ಆಗ ಹೇಳಿದರು, 'ಹರಿ ಭಾಯಿ, ನಾನು ಮುದುಕನಾಗಿ ಬಿಟ್ಟಿದ್ದೇನೆ. ಆದ್ದರಿಂದ ಇವರಾರೂ ನನ್ನ ಮಾತನ್ನು ಕೇಳುವುದಿಲ್ಲ. ನೀವೇ ಅವರಿಗೆ ಸ್ವಲ್ಪ ಒಳ್ಳೆಯ ಬುದ್ಧಿ ಹೇಳಿ.'

''೧೯೨೨ನೆಯ ಇಸವಿಯ ಏಪ್ರಿಲ್ ತಿಂಗಳಿನಲ್ಲಿ ಸ್ವಾಮಿ ಬ್ರಹ್ಮಾನಂದರ ದೇಹತ್ಯಾಗದ ಬಳಿಕ ಸ್ವಾಮಿ ಶಿವಾನಂದರು ರಾಮಕೃಷ್ಣ ಮಠ ಹಾಗೂ ಮಿಷನ್ನಿನ ಪರಮಾಧ್ಯಕ್ಷರಾದರು. ನಾನು ತಪಸ್ಸಿಗಾಗಿ ಆಲ್ಮೋರಕ್ಕೆ ಹೋಗಲು ಅವರಿಂದ ಒಂದು ತಿಂಗಳ ರಜೆಗಾಗಿ ಅನುಮತಿಯನ್ನು ಕೋರಿದೆ. ಅವರು ಅನುಮತಿಯನ್ನು ನೀಡಿದರು. ನಂತರ ಒಂದು ವಾರದೊಳಗೆ ನನ್ನನ್ನು ಕರೆದು ಹೇಳಿದರು, 'ನೋಡು, ಮಲೇಷ್ಯಾದ, ಸಿಂಗಾಪುರದ ವಿದೇಹಾನಂದರಿಗೆ ಒಬ್ಬ ಸಹಕಾರಿ ಬೇಕಂತೆ. ಯಾರೂ ಹೋಗಲು ಒಪ್ಪುತ್ತಿಲ್ಲ. ನೀನು ಹೋಗುವೆಯಾ?' ನಾನೆಂದೆ, 'ಆಗಲಿ ಮಹಾರಾಜ್, ನಾನು ಹೋಗಲು ಸಿದ್ಧನಾಗಿದೇನೆ. ವಿದೇಹಾನಂದರು ನನ್ನ ಸ್ನೇಹಿತರು. ನನಗೆ ಒಂದು ತಿಂಗಳ ಸಮಯ ಕೊಡಿ. ನಾನು ಕಾಶಿಯಲ್ಲಿ ಹರಿ ಮಹಾರಾಜರನ್ನು ಭೇಟಿಯಾಗಿ ನಂತರ ಹೋಗುತ್ತೇನೆ.'

''೧೯೨೨ರ ಜೂನ್ ತಿಂಗಳಲ್ಲಿ ನಾನು ಕಾಶಿಯಲ್ಲಿ ಹರಿ ಮಹಾರಾಜರನ್ನು ಭೇಟಿಯಾದಾಗ ಅವರಿಗೆ ಸಿಂಗಾಪುರಕ್ಕೆ ಹೋಗುವ ವಿಚಾರವನ್ನು ತಿಳಿಸಿದೆ. 'ಮಠದ ಕಾರ್ಯಕಾರಿ ಮಂಡಲಿ ಯವರು ನಿನ್ನನ್ನು ವಿದೇಶಕ್ಕೆ ಕಳುಹಿಸಬೇಕೆಂದಿದ್ದರೆ ಅಮೆರಿಕಾಗೆ ಏಕೆ ಕಳುಹಿಸಬಾರದು?' ನಿಜವಾಗಿ ಹಾಗೆಯೇ ಆಯಿತು. ಕಾರ್ಯಕಾರಿ ಮಂಡಲಿಯವರು ತಮ್ಮ ಯೋಜನೆ ಬದಲಾ ಯಿಸಿ, ೧೯೨೩ರಲ್ಲಿ ಅಮೆರಿಕದ ಸ್ಯಾನ್‌ಫ್ರಾನ್‌ಸಿಸ್ಕೋಗೆ ನನ್ನನ್ನು ವರ್ಗಾಯಿಸಿದರು.

''ಇದಾದ ಒಂದು ತಿಂಗಳ ಬಳಿಕ ಹರಿ ಮಹಾರಾಜರು ದೇಹ ತ್ಯಾಗ ಮಾಡಿದರು. ಕೊನೆಯ ಬಾರಿ ಅವರ ದರ್ಶನವನ್ನು ಮಾಡಿದ್ದಾಗ ಅವರ ಪಾದಸೇವೆಯನ್ನು ಮಾಡಿದ್ದೆ. ಅವರೊಂದು ದಿನ ಹೇಳಿದರು, 'ನೀನು ಜ್ಞಾನವನ್ನು ನೀಡಿದಷ್ಟೂ ಜ್ಞಾನವು ವೃದ್ಧಿಯಾಗುತ್ತದೆ.' ಅವರು ಕಠೋರ ಸ್ವಭಾವದವರೆಂದು ಜನರು ತಿಳಿದಿದ್ದರು. ಆದರೆ ನಾನು ಅವರಿಂದ ತುಂಬ ಪ್ರೀತಿ-ಸ್ನೇಹಗಳನ್ನು ಪಡೆದಿದ್ದೇನೆ. ನಾನು ಅವರಿಂದ ಬೀಳ್ಕೊಂಡಾಗ ಅವರು ತೀವ್ರವಾಗಿ ಅಸ್ವಸ್ಥರಾಗಿದ್ದರು. ಅವರಿಗೆ ಪ್ರಣಾಮ ಮಾಡಿದಾಗ ಅವರು ಆವೇಗಭರಿತರಾಗಿ ನನ್ನನ್ನೇ ನೋಡುತ್ತಿದ್ದರು. ನಾನು ಅವರ ದೃಷ್ಟಿಯಿಂದ ಹೊರಬೀಳುವ ತನಕ ಅವರು ನನ್ನನ್ನೇ ನೋಡುತ್ತಿದ್ದರು. ಶ್ರೀರಾಮಕೃಷ್ಣರ ಶಿಷ್ಯಂದಿರ ಪ್ರೀತಿಯನ್ನು ಮರೆಯುವಂತಿಲ್ಲ.''

* * * *

ಸ್ವಾಮಿ ಪ್ರಭವಾನಂದರ ಅಣ್ಣ ಗೋಕುಲಚಂದ್ರ ಘೋಷ್ ವಿಷ್ಣುಪುರ ಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದರು. ಅವರು 'Narada's way of Divine Love' ಪುಸ್ತಕವನ್ನು ಬಂಗಾಳಿಗೆ ತರ್ಜುಮೆ ಮಾಡಿದ್ದರು. ಮಹಾರಾಜರು ಅದನ್ನು ನನಗೆ ಸಂಪಾದನೆ ಮಾಡಲು ಕೊಟ್ಟರು. ನಾನು ಸಂಪಾದನೆ ಮಾಡಿ ಮುನ್ನುಡಿ ಬರೆದೆ. 'ನಾರದೀಯ ಭಕ್ತಿ ಸೂತ್ರ' ಎಂಬ ಹೆಸರಿನಲ್ಲಿ ಈ ಪುಸ್ತಕವು 'ಉದ್ಬೋಧನ'ದಿಂದ ಪ್ರಕಾಶಿತವಾಯಿತು.

ನಾನು ಹಾಲಿವುಡ್‌ಗೆ ಹೋದಾಗ ಅಲ್ಲಿ ಹಿಪ್ಪಿ ಮೂವ್‌ಮೆಂಟ್ ನಡೆಯುತ್ತಿತ್ತು. ನಾನು ಅವರಿಗಾಗಿ 'Meditation and Its Methods : According to Swami Vivekananda' ಪುಸ್ತಕವನ್ನು ಸಂಕಲನ ಮಾಡಿದೆ. ಈ ಪುಸ್ತಕಕ್ಕೆ ಮುನ್ನುಡಿ ಬರೆಯಲು ಮಹಾರಾಜರು ಕ್ರಿಸ್ಟೋಫರ್ ಇಷರ್

ವುಡ್‌ಗೆ ಹೇಳಿದರು. ವೇದಾಂತ ಪ್ರೆಸ್ಸಿನಿಂದ ಪ್ರಕಟಿತವಾದ ಈ ಪುಸ್ತಕವು ಅನೇಕ ಬಾರಿ ಮುದ್ರಣಗೊಂಡಿದೆ. ಇದು ಅದ್ವೈತ ಆಶ್ರಮದಿಂದ ಪ್ರಕಟಣೆಗೊಂಡಿದ್ದು ಜರ್ಮನ್ ಹಾಗೂ ಸ್ಪಾನಿಷ್‌ನಲ್ಲೂ ಅನುವಾದಿತವಾಗಿದೆ.

ಆ ಬಳಿಕ ನನ್ನ ತರಬೇತಿ ಶುರುವಾಯಿತು. ಮಹಾರಾಜರು ಹೇಳಿದರು, ''ನೋಡು, ಇಲ್ಲಿ ಅನೇಕ ಅವಿವಾಹಿತ ಮಹಿಳೆಯರಿದ್ದಾರೆ. ಅವರು ನಿನ್ನನ್ನು ಆಮಂತ್ರಿಸಿದರೆ, ಎಂದಿಗೂ ಒಬ್ಬಂಟಿ ಹೋಗಬೇಡ. ಯಾವುದೇ ಭಕ್ತ ಮಹಿಳೆ ಸಂದರ್ಶನ ಬಯಸಿದರೆ, ಆಗ ಅವರ ಅಧ್ಯಾತ್ಮಿಕ ಪ್ರಶ್ನೆಗಳಿಗೆ ಮಾತ್ರ ಉತ್ತರಿಸು. ಅವರ ವೈಯಕ್ತಿಕ ಜೀವನದಬಗ್ಗೆ ವಿಚಾರಿಸಬೇಡ. ಸಾಲ ಮಾಡಿ ಯಾವ ವಸ್ತುವನ್ನೂ ಖರೀದಿಸಬೇಡ. ನಾವು ಸಾಧುಗಳು – ನಾವು ಹಣ ಸಂಪಾದಿಸುವುದಿಲ್ಲ. ಈ ದೇಶದಲ್ಲಿ ಸಾಲ ತೀರಿಸದಿದ್ದರೆ ಬ್ಯಾಂಕ್ ಸ್ವತ್ತನ್ನು ತೆಗೆದುಕೊಂಡು ಬಿಡುತ್ತದೆ. ಸಭಾಂಗಣದಿಂದ ಎಂದಿಗೂ ಹಣಕ್ಕಾಗಿ ಮನವಿ ಸಲ್ಲಿಸಬೇಡ. ಠಾಕೂರರು ಕೊಟ್ಟದ್ದರಲ್ಲಿ ಸಂತುಷ್ಟನಾಗಿರು. ಈ ದೇಶದಲ್ಲಿ ಕ್ರಿಶ್ಚಿಯನ್ ಚರ್ಚಗಳಲ್ಲಿ ಪುನಃ ಪುನಃ ಹಣಕ್ಕಾಗಿ ಮನವಿ ಸಲ್ಲಿಸುತ್ತಾರೆ, ಅದರಿಂದ ಜನರು ಬೇಸತ್ತು ಹೋಗಿದ್ದಾರೆ. ಈ ದೇಶದಲ್ಲಿ ಯಾವುದೇ ಅನ್ಯಾಯವನ್ನೂ ಮಾಡಬೇಡ. ಒಮ್ಮೆ ಸಿಕ್ಕಿಹಾಕಿಕೊಂಡರೆ ಪತ್ರಿಕಾ ಮಾಧ್ಯಮ ನಮ್ಮ ಹೆಸರನ್ನು ಹಾಳು ಮಾಡಿಬಿಡುತ್ತದೆ. ಭಾಷಣವನ್ನು ಚೆನ್ನಾಗಿ ತಯಾರಿಸಿಕೊ. ನಿನ್ನ ಭಾಷಣವನ್ನು ಕೇಳಿ ಜನರು ಆಕರ್ಷಿತರಾಗಿ ಸದಸ್ಯರಾಗುತ್ತಾರೆ. ನೋಡು, ಈ ಅಮೆರಿಕನ್ ಭಕ್ತರು ಒಂದು ಸಲ, ಎರಡು ಸಲ, ಐದು ಸಲ ನಿನ್ನ ಭಾಷಣವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ನಂತರವೂ ಅರ್ಥವಾಗದಿದ್ದರೆ ಎಲ್ಲರೂ ಹೊರಟುಹೋಗುತ್ತಾರೆ. ಆದ್ದರಿಂದ, ನೀನು ಭಾಷಣದ ತರಬೇತಿ ಪಡೆಯಬೇಕು.''

ನನಗೆ ಭಾಷಣ ಮಾಡಲು ಕಲಿಸಲು ಮಹಾರಾಜರು ತಮ್ಮ ಪ್ರೌಢ ಶಿಷ್ಯೆಯಾದ ಆರ್ಲಿನ್ ಕ್ರೇನ್(ಮಾಧುರಿ) ರನ್ನು ಗೊತ್ತು ಮಾಡಿದರು. ಆಕೆ ಸ್ವಾಮಿ ಅಸಕ್ತಾನಂದರ ಶಿಕ್ಷಕಿಯೂ ಆಗಿದ್ದರು. ಮಾಧುರಿ ಒಬ್ಬ ನಟಿ; ಹಾಗೂ ಆಕೆಯ ಪತಿ ಸಿನಿಮಾ ನಿರ್ದೇಶಕರಾಗಿದ್ದರು. ಅವರ ಜನ್ಮ ಸ್ಥಳ ಸ್ಕಾಟ್ಲೆಂಡ್. ಆಕೆಯ ಭಾಷೆ ಹಾಗೂ ಶಬ್ದೋಚ್ಚಾರಣೆಯ ಮಾಧುರ್ಯ ಹಾಗೂ ಶುದ್ಧತೆ ಅತುಲನೀಯವಾಗಿತ್ತು . ಮಾತು ಮುತ್ತಿನಂತೆ. ಅಷ್ಟು ಸ್ಪಷ್ಟ ಉಚ್ಚಾರಣೆಯನ್ನು ನಾನೆಂದೂ ಕೇಳಿಲ್ಲ. ಆಕೆ ವಿದೇಶಿ ವಿದ್ಯಾರ್ಥಿಗಳಿಗೂ ಭಾಷಣಕಾರರಿಗೂ ತರಬೇತು ನೀಡುತ್ತಿದ್ದರು. ಅದು ಇರಲಿ, ಪ್ರತಿ ಭಾನುವಾರದಂದು ನಾನು ಮಾಡಿದ ತಪ್ಪುಗಳನ್ನು ಗುರುತು ಮಾಡಿಕೊಳ್ಳುತ್ತಿದ್ದರು. ನಂತರ ವಾರಕ್ಕೊಂದು ದಿನ ಗ್ರೀನ್ ಹೌಸಿನ ಸ್ವಾಗತ ಕೊಠಡಿಯಲ್ಲಿ ಕುಳಿತು ತಿದ್ದುಪಡಿ ಮಾಡಿಕೊಡುತ್ತಿದ್ದರು. ನಾನು ಅವರ ಪಾಠಗಳನ್ನು ಟೇಪ್ ಮಾಡಿಕೊಂಡು ನನ್ನ ಕೋಣೆಯಲ್ಲಿ ಅಭ್ಯಾಸ ಮಾಡುತ್ತಿದ್ದೆ. ಆ ಟೇಪ್‌ಗಳು ಇಂದಿಗೂ ನನ್ನ ಬಳಿ ಇವೆ. ಮಾಧುರಿ ಒಂದು ದಿನ ಹೇಳಿದರು, ''ಸ್ವಾಮಿ, ನಿಮಗೆ ಸ್ಫೂರ್ತಿ ಬಂದಾಗ ನೀವು ವೇಗವಾಗಿ ಮಾತನಾಡುತ್ತೀರಿ. ಸ್ವಲ್ಪ ನಿಧಾನ ಮಾತನಾಡಿ. ಇಲ್ಲದಿದ್ದರೆ ಅಮೆರಿಕಾ ಪ್ರೇಕ್ಷಕರಿಗೆ ನಿಮ್ಮ ಮಾತು ಅರ್ಥವಾಗದು.'' ಮಾಧುರಿ ಒಂದು ದಿನ ತಮಾಷೆಯಾಗಿ ಹೇಳಿದರು, ''ನೀವು ಬೇಗ–ಬೇಗನೆ ಮಾತನಾಡಿದರೆ, ನಾನು ನಿಮ್ಮ ಕಾಲಿಗೊಂದು ದಾರ ಕಟ್ಟಿ, ಅದನ್ನು ಎಳೆಯುತ್ತೇನೆ.'' ನನಗೆ ನಗು ಬಂತು. ೧೯೮೪ರಲ್ಲಿ ಮಾಧುರಿ ಕ್ಯಾನ್ಸರ್‌ನಿಂದ ನಿಧನರಾದರು. ನಾನು ಅವರನ್ನು ನೋಡಲು ಕೃಷ್ಣಾನಂದರೊಂದಿಗೆ ಅವರ ಮನೆಗೆ ಹೋಗಿದ್ದೆ. ಸಂಭಾಷಣೆ ಅರ್ಥ ಮಾಡಿಸಲು ಅವರು ನನ್ನನ್ನು ಥಿಯೇಟರ್ ನೋಡಲು ಕರೆದುಕೊಂಡು ಹೋಗಿದ್ದರು. ಈ ಮಹಿಳೆಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ಹಾಲಿವುಡ್‌ನ ದಿನಚರಿ ಹೀಗಿತ್ತು: ಮೂರು ಸಲ ಜಪ, ಧ್ಯಾನ – ಬೆಳಗ್ಗೆ ೭ ರಿಂದ ೮ರ ವರೆಗೆ, ಮಧ್ಯಾಹ್ನ ೧೨ ರಿಂದ ೧ರ ವರೆಗೆ ಮತ್ತೆ ಸಂಜೆ ೬ರಿಂದ ೭ರ ವರೆಗೆ. ಮಂಗಳವಾರ ಶಾಸ್ತ್ರ–ತರಗತಿಗಳು – ಸಂಜೆ ೮ರಿಂದ ೯ರ ವರೆಗೆ. ಬುಧವಾರ 'Gospel of Sri Ramakrishna'ದ ತರಗತಿ, ಸಂಜೆ ೮ ರಿಂದ ೯ರ ವರೆಗೆ. ಈ ತರಗತಿಯನ್ನು ಕ್ರಿಸ್ಟೋಫರ್ ಇಷರ್‌ವುಡ್ ೩೦ ನಿಮಿಷ ತೆಗೆದುಕೊಳ್ಳುತ್ತಿದ್ದು, ಉಳಿದ ಅರ್ಧಗಂಟೆ ಮಹಾರಾಜರ ಪ್ರಶ್ನೋತ್ತರಗಳಿಗೆ ಮೀಸಲಾಗಿತ್ತು. ಅವರು ಅಸ್ವಸ್ಥರಾಗಿದ್ದರೆ ಸ್ವಾಮಿ ಅಸಕ್ತಾನಂದರು ಅಥವಾ ನಾನು ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದೆವು.

ಉಡುಗೆ–ತೊಡುಗೆಯ ಬಗ್ಗೆ ಮಹಾರಾಜರು ತುಂಬ ಗಮನ ಹರಿಸುತ್ತಿದ್ದರು. ಅವರು ಸ್ವತಃ ಬಹಳ ಸಾಂಪ್ರದಾಯಿಕ ಪಾಶ್ಚಾತ್ಯ ಪೋಷಾಕನ್ನು ತೊಡುತ್ತಿದ್ದರಾದರೂ ಭಾಷಣ ನೀಡುವಾಗ ಅಥವಾ ತರಗತಿಗಳನ್ನು ನಡೆಸುವಾಗ ಕಾವಿ ಬಟ್ಟೆಯನ್ನು ಉಡುತ್ತಿದ್ದರು. ಅವರು ನನಗೆ ''ಒಳ್ಳೆಯ ಅಂಗಡಿಯಿಂದ ಉತ್ತಮ ಗುಣಮಟ್ಟದ ಸೂಕ್ತ ಉಡುಗೆಯನ್ನು ಖರೀದಿಸು'' ಎಂದಿದ್ದರು. ಅಮೆರಿಕನ್ ಬ್ರಹ್ಮಚಾರಿ ಸತ್‌ಚೈತನ್ಯ ನನಗೆ ಒಳ್ಳೆಯ ಸಾಂಪ್ರದಾಯಿಕ ಪೋಷಾಕನ್ನು ಕೊಡಿಸಿದ್ದರು. ಮಹಾರಾಜ್ ಹೇಳುತ್ತಿದ್ದರು, ''ಅಮೆರಿಕನ್ನರು ಬಟ್ಟೆಬರೆಗಳಿಗೆ ಬಹಳ ಗಮನ ಕೊಡುತ್ತಾರೆ. ನಿನ್ನ ಸಾಧಾರಣ ಬಟ್ಟೆ ನೋಡಿ ನಿನ್ನನ್ನು ಕೆಳವರ್ಗದವನು ಎಂದುಕೊಳ್ಳುವರು. ನೀನು ದೊಡ್ಡ ಮನುಷ್ಯರೊಂದಿಗೆ ಬೆರೆಯಲಾಗದು.'' ಮಹಾರಾಜರು ಅಮೆರಿಕನ್ನರೊಂದಿಗೆ ೫೩ ವರ್ಷಗಳನ್ನು ಕಳೆದಿದ್ದರು. ತಮ್ಮ ದೀರ್ಘಕಾಲದ ಅನುಭವದಿಂದ ನನಗವರ ಅನೇಕ ವಿಷಯಗಳನ್ನು ಹೇಳಿಕೊಟ್ಟಿದ್ದರು. ಈ ದೇಶದಲ್ಲಿ ನಾನು ಸುಮಾರು ೪೭ ವರ್ಷ ಕಳೆದಿದ್ದೇನೆ. ಈಗ ಅಮೆರಿಕನ್ನರ ಉಡುಗೆ–ತೊಡುಗೆಗಳು ಬಹಳ ಸಾಮಾನ್ಯವಾಗಿ ಬಿಟ್ಟಿದೆ. ಆದರೆ ನಾನು ಮಾತ್ರ ಇಲ್ಲಿ ಆ ಹಿರಿಯ ಸಾಧುಗಳ ಆದೇಶವನ್ನೇ ಪಾಲಿಸುತ್ತೇನೆ. ***(ಮುಂದುವರಿಯುವುದು)***